**PW-1:** ಇಂದ್ರಮ್ಮ

ದಿನಾಂಕಃ **02.07.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ 5ನೇ ಪ್ರತಿವಾದಿ ಪರವಾಗಿ ಶ್ರೀ ಬಿ.ಎಂ.ಆರ್.ವಕೀಲರಿಂದಃ**

1. ನನ್ನ ತಾತನ ಹೆಸರು ಗೋವಿಂದಪ್ಪ. ನನ್ನ ಅಜ್ಜಿಯ ಹೆಸರು ನಾಗಮ್ಮ. ನನ್ನ ತಾತನಿಗೆ ಇಬ್ಬರೂ ಗಂಡು ಮಕ್ಕಳು 4 ಜನ ಹೆಣ್ಣುಮಕ್ಕಳು. ಅವರೆಂದರೆ ವೆಂಕಟಮ್ಮ, ಅಶ್ವತ್ಥಮ್ಮ, ಅಕ್ಕಲಮ್ಮ ಮತ್ತು ರಾಮಾಂಜಿನಮ್ಮ ಮತ್ತು ಗಂಡು ಮಕ್ಕಳು ಹನುಮಂತರೆಡ್ಡಿ ಮತ್ತು ನಾರಾಯಣರೆಡ್ಡಿ. ಹನುಮಂತರೆಡ್ಡಿ ನನ್ನ ತಂದೆ. ನಮ್ಮ ತಂದೆಗೆ ನಾವು 4 ಜನ ಹೆಣ್ಣುಮಕ್ಕಳು ಇಬ್ಬರೂ ಗಂಡುಮಕ್ಕಳು. ಆ ಪೈಕಿ ಗೋವಿಂದರೆಡ್ಡಿ ಮತ್ತು ನನ್ನ ಅಕ್ಕ ಸುವರ್ಣಮ್ಮ ಜೀವಂತ ಇರುವುದಿಲ್ಲ. ಸುವರ್ಣಮ್ಮ ರವರಿಗೆ ಇಬ್ಬರೂ ಗಂಡು ಮಕ್ಕಳು ಒಬ್ಬ ಹೆಣ್ಣು ಮಗಳು. ಗೋವಿಂದರೆಡ್ಡಿಗೆ ಇಬ್ಬರೂ ಹೆಣ್ಣುಮಕ್ಕಳು ಮತ್ತು ಒಬ್ಬ ಮಗ. ಸುವರ್ಣಮ್ಮ ರವರ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಗೋವಿಂದರೆಡ್ಡಿ ಪತ್ನಿ ಮತ್ತು ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಈ ದಾವೆಯನ್ನು ನಮ್ಮ ತಂದೆಯ ತಂದೆಗೆ ಸೇರಿದ ಸ್ವತ್ತುಗಳಿಗೆ ಸಲ್ಲಿಸಿದ್ದೇನೆ. ಅವುಗಳ ಸರ್ವೇ ನಂಬರ್ ಗಳನ್ನು ಹೇಳಲು ಆಗುವುದಿಲ್ಲ. ದಾವಾ ಸ್ವತ್ತುಗಳ ಚೆಕ್ಕುಬಂದಿ ಹೇಳಲು ಆಗುವುದಿಲ್ಲ.

2. ನನ್ನ ತಂದೆ ಮತ್ತು ನಮ್ಮ ಚಿಕ್ಕಪ್ಪ ರವರ ನಡುವೆ 1974 ರಲ್ಲಿ ವಿಭಾಗವಾಗಿತ್ತು. ಸದರಿ ವಿಭಾಗವು ಬರವಣಿಗೆ ಅಥವಾ ಬಾಯಿ ಮಾತಿನ ಮುಖಾಂತರ ಆಗಿತ್ತಾ ಎಂದು ನನಗೆ ಗೊತ್ತಿಲ್ಲ. ನಮ್ಮ ತಾತ ಮೃತಪಟ್ಟ ನಂತರ ಹನುಮಂತರೆಡ್ಡಿ ರವರು ಕುಟುಂಬದ ಜವಾಬ್ದಾರಿಯನ್ನು ವಹಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರು ಮನೆಯ ಜವಾಬ್ದಾರಿ

ವಹಿಸಿಕೊಂಡಿದ್ದ ಕಾರಣ ಗೋವಿಂದರೆಡ್ಡಿ ರವರು ಮೃತಪಟ್ಟ ನಂತರ ಖಾತೆ ಮತ್ತು ಪಹಣಿಗಳು ಹನುಮಂತರೆಡ್ಡಿ ರವರಿಗೆ ಫವತಿ ವಾರಸು ಮೂಲಕ ವರ್ಗಾವಣೆಯಾಗಿರುತ್ತದೆ ಎಂದರೆ ಸಾಕ್ಷಿಯು ನನ್ನ ಚಿಕ್ಕಪ್ಪ ಮತ್ತು ಇಬ್ಬರಿಗೂ ಆಗಿದೆ ಎಂದು ಉತ್ತರಿಸುತ್ತಾರೆ. ನನ್ನ ತಂದೆ ಮತ್ತು ಚಿಕ್ಕಪ್ಪ ರವರು ಯಾವುದೇ ರೀತಿಯ ವಿಭಾಗ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ಪ್ರತಿವಾದಿ 5 ರವರಿಗೂ ಭಾಗ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ನಮ್ಮ ತಂದೆಯ ಸ್ವಯಾರ್ಜಿತ ಸ್ವತ್ತುಗಳಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ನಮ್ಮ ತಂದೆಗೆ ಸೇರಿದ್ದವು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೀರಿ ಎಂದರೆ ಸಾಕ್ಷಿಯು ಅದು ಕೊಂಡಿರುವುದಿಲ್ಲ ಅದು ನಮ್ಮ ತಂದೆಯ ಸ್ವತ್ತು ಎಂದು ಉತ್ತರಿಸುತ್ತಾರೆ. ದಾವಾ ಸ್ವತ್ತುಗಳು ನಮ್ಮ ತಾತನ ಸ್ವತ್ತುಗಳಾಗಿದ್ದು ತಂದೆಯ ಸ್ವತ್ತುಗಳಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ನಮ್ಮ ತಂದೆಗೆ ಯಾವ ರೀತಿ ಬಂದವು ಎಂದು ಗೊತ್ತಿಲ್ಲದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

Sd/-

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.